ಕರಡಿ ದಾಳಿಯಿಂದ ಪ್ರಾಣ ಕಳೆದುಕೊಂಡವರು

934 (1371); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಕರಡಿ ದಾಳಿಯಿಂದ ಮೃತಪಟ್ಟವರ ಸಂಖ್ಯೆ ಎಷ್ಟು; ತೀವ್ರವಾಗಿ ಗಾಯಗೊಂಡವರೆಷ್ಟು; (ವಿವರ ನೀಡುವುದು)

ಆ) ಹಾಗಿದ್ದಲ್ಲಿ, ಮೃತಪಟ್ಟವರ ಕುಟುಂಬಗಳಿಗಾಗಿ ನೀಡಿರುವ ಪರಿಹಾರದ ಮೊತ್ತವೆಷ್ಟು; (ವಿವರ ನೀಡುವುದು)

ಇ) ತೀವ್ರವಾಗಿ ಗಾಯಗೊಂಡವರಿಗೆ ಎಲ್ಲಿ ಚಿಕಿತ್ಸೆ ನೀಡಲಾಗಿದೆ; ಚಿಕಿತ್ಸೆಗೆ ಮಾಡಿದ ವೆಚ್ಚವೆಷ್ಟು; ಪೂರ್ಣ ಗುಣಮುಖರಾಗಿದ್ದಾರೆಯೇ; ಅವರಿಗೆ ಪರಿಹಾರ ನೀಡಲಾಗಿದೆಯೇ? (ವಿವರ ನೀಡುವುದು)

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಕರಡಿ ದಾಳಿಯಿಂದ ಒಬ್ಬರು ಮೃತಪಟ್ಟಿರುತ್ತಾರೆ ಹಾಗೂ ಒಬ್ಬರು ಗಾಯಗೊಂಡಿರುತ್ತಾರೆ. ವಿವರ ಕೆಳಕಂಡಂತಿದೆ:–

ಕ್ರ ಸಂ.	ಕರಡಿ ದಾಳಿ ಮಾಡಿದ ದಿನಾಂಕ ಮತ್ತು ಸ್ಥಳ	ಕರಡಿಯಿಂದ ಮೃತಪಟ್ಟಿರುವವರ ವಿವರ	ಕರಡಿಯಿಂದ ಗಾಯಗೊಂಡಿರುವವರ ವಿವರ
1	17.11.2014 ಶೋಬೆನಹಳ್ಳಿ ಹತ್ತಿರ	–	ಶ್ರೀ ತಿಮ್ಮಣ್ಣ, ಗರಣಿ, ಐ.ಡಿ. ಹಳ್ಳಿ ಹೋಬಳಿ
2	17.11.2014 ಶೋಬೆನಹಳ್ಳಿ ಹತ್ತಿರ	ಶ್ರೀ ಸೋಮಣ್ಣ ಬಿನ್ ಈರಣ್ಣ ಚನ್ನಮಲ್ಲನಹಳ್ಳಿ, ಐ.ಡಿ.ಹಳ್ಳಿ ಹೋಬಳಿ	–

ಆ) ಮೃತಪಟ್ಟಿರುವ ಶ್ರೀ ಸೋಮಣ್ಣ ಬಿನ್ ಈರಣ್ಣ ಚನ್ನಲ್ಲನಹಳ್ಳಿ, ಐ.ಡಿ. ಹಳ್ಳಿ ಹೋಬಳಿ ಇವರ ಪತ್ನಿ ಶ್ರೀಮತಿ ಗಂಗಮ್ಮ ಇವರಿಗೆ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದ ಪ್ರಕಾರ ₹ 5.00 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲಾಗಿರುತ್ತದೆ.

ಇ) ತೀವ್ರವಾಗಿ ಗಾಯಗೊಂಡಿರುವ ಶ್ರೀ ತಿಮ್ಮಣ್ಣ ಇವರನ್ನು ತುಮಕೂರು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಗಾಯಾಳು ಚಿಕಿತ್ಸೆಗೆ ಸ್ಪಂದಿಸದೇ ಇರುವುದರಿಂದ ದಿನಾಂಕ: 03.01.2015 ರಂದು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಈಗ ಗಾಯಾಳುವು ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡವರಿಗೆ ನಿಯಮಾನುಸಾರ ₹ 50,000/– ಗಳ ದಯಾತ್ಮಕ ಧನವನ್ನು ಪಾವತಿಸಲಾಗಿರುತ್ತದೆ.

ರಾಜ್ಯದ ಮೃಗಾಲಯಗಳು

935 (1375); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ರಾಜ್ಯದಲ್ಲಿರುವ ಹಿರಿಯ ಮತ್ತು ಕಿರಿಯ ಮೃಗಾಲಯಗಳು ಯಾವುವು;

ಆ) ಈ ಮೃಗಾಲಯಗಳಲ್ಲಿ ಕೇಂದ್ರ ಮೃಗಾಲಯ ಪ್ರಾಧಿಕಾರದ ನಿಯಮಾವಳಿಗಳಂತೆ ಎಲ್ಲಾ ಸೌಲಭ್ಯಗಳು ಇವೆಯೇ; ಯಾವ್ಯಾವ ಮೃಗಾಲಯಗಳಲ್ಲಿ ಕನಿಷ್ಠ ಸೌಲಭ್ಯಗಳು ಲಭ್ಯವಿರುವುದಿಲ್ಲ.

ಇ) ಕೇಂದ್ರ ಮೃಗಾಲಯದ ನಿಯಮಾವಳಿಯಂತೆ ಇಲ್ಲದ ಮೃಗಾಲಯಗಳ ಮೇಲೆ ಸರ್ಕಾರ ಯಾವ ಕ್ರಮ ಜರುಗಿಸಿದೆ;

ಈ) ಪಿಲಿಕುಳ ನಿಸರ್ಗಧಾಮದ ಮೃಗಾಲಯದ ಅಭಿವೃದ್ಧಿಗೆ ಅರಣ್ಯ ಇಲಾಖೆಯು ಈವರೆಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು;